ಈಗ ಮನೆ ಮಗ ಮರಳಿದ್ದರಿಂದ ಅವರು ನಗುನಗುತ್ತ ಹರ್ಷಚಿತ್ತ ರಾಗುತ್ತಿದ್ದರು. ರಾಯರೂ ಆರೋಗ್ಯದ ಬಗ್ಗೆ ನಿಗಾವಹಿಸಿ ಬೇಗನೇ ಮನೆ ಸೇರುತ್ತಿದ್ದರು. ದಂಪತಿಯ ನಡುವಿನ ವೈಮನಸ್ಸು ದೂರವಾಗಿತ್ತು. ಸೂರ್ಯನನ್ನು ಕರೆದು ತಮ್ಮೊಂದಿಗೆ ಕುಳ್ಳಿರಿಸಿ ಎಲ್ಲರೂ ಜೊತೆಯಾಗಿ ಕುಳಿತು ಹರಟುತ್ತಿದ್ದರು. ತಂದೆ ಮಗನ ನಡುವಿನ ಅಂತರ ಕಡಿಮೆಯಾಗಿ ಅಪೂರ್ವ ಡಾ.ಮುರಳಿಯವರ ಸಲಹೆಗಳನ್ನು ರಾಯರ ಬಳಿ ಚರ್ಚಿಸುತ್ತಿದ್ದರಿಂದ, ರಾಯರು ಅದನ್ನು ಕಾರ್ಯಗತಗೊಳಿಸಿದರು.

ಸೂರ್ಯನ ಮನದಲ್ಲಿ ಕಾಡುತ್ತಿದ್ದ ಕೌಟುಂಬಿಕ ಪ್ರೀತಿಯ ಅಭಾವ ಈಗ ನೀಗಿತ್ತು. ಆ ಕುಟುಂಬ ಈಗ ಒಂದಾಗಿ ಬೆರೆತು, ಆನಂದದಿಂದ ಇರುವುದನ್ನು ಕಂಡು ಅಪೂರ್ವಳಲ್ಲಿ ಏನೋ ಸಮಾಧಾನ. ಈ ಬಾಂಧವ್ಯ ಸದಾ ಹೀಗೆ ಇರಲೆಂದು ಅವಳು ಮನದಲ್ಲೇ ಹಾರೈಸುತ್ತಿದ್ದಳು. ವಿಜಯಮ್ಮನಿಗೆ ಅಪೂರ್ವಳನ್ನು ಕೊಂಡಾಡಿದಷ್ಟೂ ಸಾಲದು.

'ಇದೆಲ್ಲಾ ಆಗಿದ್ದು ನಿನ್ನಿಂದ ಅಪೂರ್ವ.. ಇಂಥ ದಿನ ಬರುತ್ತೆ ಅಂತ ನಾನು ಕನಸಲ್ಲೂ ನೆನೆಸಿರಲಿಲ್ಲ. ನನ್ನ ಮಗನನ್ನು ನೀನು ವಾಪಾಸ್ಸು ಕೊಟ್ಟುಬಿಟ್ಟೆ. ತಂದೆ ಮಗನನ್ನು ಒಂದು ಮಾಡಿದೆ. ಸೂರ್ಯ ಸರಿ ಹೋಗಿರೋದು.. ನಿನ್ನಿಂದ... ನಿನ್ನ ಉಪಕಾರ ನಾನು ಹೇಗೆ ತೀರಿಸಲಿ?'

'ಉಪಕಾರದ ಮಾತೇಕೆ ಆಂಟಿ? ನೀವು ನನಗೆ ಮಾಡ್ತಿರುವ ಉಪಕಾರ ಕಮ್ಮೀನಾ? ಅದಕ್ಕಾಗಿ ನಾನೇನೇ ಮಾಡಿದರೂ ಕಮ್ಮೀನೇ.. ನೀವೆಲ್ಲ ನಗುನಗುತ್ತ ಹೀಗೇ ಸದಾ ಆನಂದದಿಂದ ಇರ್ಬೇಕು.. ಅದೇ ನನ್ನ ಆಸೆ'

'ಇಷ್ಟು ಸಣ್ಣ ವಯಸ್ಸಲ್ಲಿ ಎಷ್ಟೊಂದು ದೊಡ್ಡ ಮನಸ್ಸು ನಿನಗೆ? ನಿನ್ನ ದೇವ್ರು ಸದಾ ಒಳ್ಳೇದು ಮಾಡಲಿ..!' ಎಂದು ಹರಸಿದರು.

ಇಷ್ಟಾಗಿಯೂ ಅಪೂರ್ವ ಡಾ.ಮುರಳಿಯ ಬಳಿ ಸೂರ್ಯನನ್ನು ನಿಯಮಿತವಾಗಿ ಕರೆದೊಯ್ದು ಕೌನ್ಸಿಲಿಂಗ್ ನಡೆಸುತ್ತಿದ್ದಳು. ಸೂರ್ಯನ ಸ್ವಭಾವದಲ್ಲಿ ಹಂತಹಂತವಾಗಿ ಬದಲಾವಣೆ ಬರತೊಡಗಿತ್ತು. ವೈದ್ಯರ ಬಳಿಯೂ ಸೂರ್ಯ ಈಗ ಮನಬಿಚ್ಚಿ ನಿಸ್ಸಂಕೋಚವಾಗಿ ಮಾತನಾಡುವಷ್ಟು ಸ್ನೇಹ ಬೆಳೆಸಿದ್ದ. ತನ್ನ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದ. ಅವನಲ್ಲಿ ಮೂಡಿದ ಈ ಬದಲಾವಣೆಗಳು ಸ್ವತಃ ಡಾ.ಮುರಳಿಗೇ ಅಚ್ಚರಿ ಮೂಡಿಸಿತ್ತು.

'ಸೂರ್ಯ ಈಗ ತುಂಬಾ ಬದಲಾಗಿದ್ದಾನೆ.. ಇದು ಕೇವಲ ನನ್ನ ಮಾತುಗಳ ಪರಿಣಾಮದಿಂದ ಆದದ್ದಲ್ಲ.. ಇದು ಹೇಗೆ ಸಾಧ್ಯವಾಯ್ತು?'

'ಮನೆ ವಾತಾವರಣ ಈಗ ಬದಲಾಗಿದೆ ಡಾಕ್ಟರ್.. ಎಲ್ಲರ ಜೊತೆ ಬೆರೆತು.. ಮಾತನಾಡ್ತಿರೋದ್ರಿಂದ ಅವರ ಹೃದಯದ ಭಾರ ಕಮ್ಮಿಯಾಗಿದೆ.. ಮನಸ್ಸು ನಿರಾಳವಾಗಿದೆ.. ಯಾವ ಕೊರಗು ಅವರ ಹೃದಯದಲ್ಲಿ ಕಾಡ್ತಾ ಇಲ್ಲ. ಆ ಕಾರಣದಿಂದ ಅವ್ರ ನಡವಳಿಕೆ ಮೇಲೆ ಈ ಪರಿಣಾಮ ಬೀರಬಹುದು.. ಜೊತೆಗೆ ಪುಸ್ತಕಗಳನ್ನೂ ಗಂಭೀರವಾಗಿ ಓದ್ತಾರೆ' ಎಂದು ತನಗೆ ತೋಚಿದ ಕಾರಣಗಳನ್ನು ಅಪೂರ್ವ ಹೇಳಿದಳು.

'ಹೌದು.. ನಮ್ಮ ಪ್ರಯತ್ನಕ್ಕಿಂತಲೂ ಮನುಷ್ಯನಲ್ಲಿ ಇಚ್ಛಾಶಕ್ತಿ ಇದ್ದರೆ ಏನನ್ನೂ ಜಯಿಸಬಹುದು ಅನ್ನುವುದು ಇದಕ್ಕೇನೇ.. ಅವನಲ್ಲಿ ಜೀವನೋತ್ಸಾಹ ಮೂಡಿದೆ. ತಾಳ್ಮೆ ಬಂದಿದೆ.. ಗಾಂಭೀರ್ಯ ಬಂದಿದೆ.. ಅಷ್ಟಿಷ್ಟ ಪಟ್ಟರೆ ಮಾತ್ರ ಕರ್ಕೊಂಡು ಬನ್ನಿ ಇನ್ನು.. ಇಲ್ದಿದ್ರೆ ನನ್ನ ಅಗತ್ಯ ಅವ್ನಿಗಿಲ್ಲ.. ಅನ್ಸುತ್ತೆ' ಎಂದಿದ್ದರು ಡಾ.ಮುರಳಿ.

ಅಲ್ಲಿಂದ ಹಿಂತಿರುಗುವಾಗ ಸೂರ್ಯ, 'ನನ್ನ ಪುಸ್ತಕಗಳೆಲ್ಲ ಓದಿಯಾಗಿದೆ. ನನಗೆ ಬೇರೆ ಪುಸ್ತಕಗಳಿದ್ರೆ ಬೇಕು. ಪುಸ್ತಕದಂಗಡಿಗೆ ಹೋಗೋಣ್ವಾ..?' ಎಂದು ಪ್ರಶ್ನಿಸಿದಾಗ ಅಪೂರ್ವಳಿಗೆ ಎಲ್ಲಿಲ್ಲದ ಹಿಗ್ಗು ಮೂಡಿತ್ತು. ಅವನೆಡೆಗೆ ಕಣ್ಣರಳಿಸಿ ನೋಡಿದಳು. ಅವನಲ್ಲಿ ಮೂಡಿದ್ದ ಈ ಬದಲಾವಣೆಗೆ ತನ್ನ ಪ್ರಯತ್ನಕ್ಕೆ ತಂದ ಜಯ ಎಂಬ ಸಾರ್ಥಕತೆ ಅವಳಲ್ಲಿ ಮೂಡಿತ್ತು. ಪ್ರತೀ ಸಲ ಡಾ.ಮುರಳಿಯ ಬಳಿ ಅಪೂರ್ವ ಮತ್ತು ಸೂರ್ಯನನ್ನು ಕರೆದೊಯುವ ಸಾರಥ್ಯ ವಹಿಸುತ್ತಿದ್ದ ಡಾ.ಆದರ್ಶ ಸೂರ್ಯನಲ್ಲಿ ಮೂಡಿದ ಬದಲಾವಣೆಗೆ ಸಾಕ್ಷಿಯಾಗಿದ್ದ. ಪುಸ್ತಕದಂಗಡಿಯಲ್ಲಿ ತನಗೆ ಬೇಕಾದ ಪುಸ್ತಕಗಳನ್ನು ಆಯ್ದು ಓದಿ ಎಚ್ಚರದಿಂದ ಆಯ್ಕೆ ಮಾಡುತ್ತಿದ್ದ ಸೂರ್ಯನ ಪರಿ ಕಂಡು ದೂರದಿಂದ ನೋಡುತ್ತಿದ್ದ ಡಾ.ಆದರ್ಶನಿಗೂ, ಅಪೂರ್ವಳಿಗೂ ಬೆರಗು ಮೂಡಿತ್ತು.

'ಅಂತೂ ಇಂತೂ ಈ ಅರೆಹುಚ್ಚನನ್ನು ಸರಿ ಮಾಡಿದೆ ನೀನು..' ಆದರ್ಶ ನುಡಿದಾಗ, ಅಪೂರ್ವ ಅವನೆಡೆಗೆ ತೀಕ್ಷ್ಣವಾಗಿ ನೋಡಿದಳು.

'ನಿಮ್ಮ ಭಾಷೆಯ ಪ್ರಯೋಗ ತುಂಬಾ ಕೀಳು ಮಟ್ಟದ್ದು ಆದರ್ಶ..ನೀವು ಡಾಕ್ಟರ್ ಹೌದಾ? ಅರೆ ಹುಚ್ಚ ಯಾರು ಅಂತ ನನಗೆ ಈಗ ಅನುಮಾನ ಶುರುವಾಗಿದೆ. ಡಾ.ಮುರಳಿಯ ಬಳಿ ನಿಮಗೆ ಈಗ ಕೌನ್ಸಿಲಿಂಗ್ ಅಗತ್ಯ ಇದೆ ಅಂತ ಕಾಣ್ಸುತ್ತೆ' ಅಪೂರ್ವಳ ನೋಟದಷ್ಟೇ ಹರಿತವಾಗಿದ್ದ ಮಾತುಗಳನ್ನು ನಿರೀಕ್ಷಿಸಿರದ ಆದರ್ಶನ ಮುಖ ವಿವರ್ಣವಾಯಿತು.

'ಯಾಕೆ ಅವ್ರ ಬಗ್ಗೆ ಈ ರೀತಿ ಅಸಡ್ಡೆಯಿಂದ ಮಾತನಾಡ್ತೀರ? ಅವ್ರ ಬಗ್ಗೆ ಒಳ್ಳೇ ಭಾವನೆ ಇಲ್ವಾ ನಿಮ್ಗೆ? ಆತನ ಬಗ್ಗೆ ತುಚ್ಛವಾಗಿ ಮಾತನಾಡಿದ್ರೆ ನಾನು ಸಹಿಸಲ್ಲ'.

'ಅದೇ ಯಾಕೆ ಅಂತ.. ನಿಮ್ಗೆ ಯಾಕೆ ಅವ್ನ ಬಗ್ಗೆ ಇಷ್ಟೊಂದು ಕಾಳಜಿ.. ಪ್ರೀತಿ ನಿಮ್ಗೆ? ಅವನ ಮೇಲೆ ಕನಿಕರ ತೋರಿಸ್ತ.. ತೋರಿಸ್ತ' ಆದರ್ಶ ತನ್ನ ಅನುಮಾನವನ್ನು ತುಟಿಗಳಿಂದ ಜಾರದಂತೆ ನಿಗ್ರಹಿಸಿಕೊಂಡರೂ, ಹೇಳದೇ ಉಳಿದ ಮಾತು ಅಪೂರ್ವಳಿಗೆ ಗ್ರಹಿಕೆಯಾಗಿತ್ತು.

'ಸದಾಶಿವನಿಗೆ ಒಂದೇ ಧ್ಯಾನವಂತೆ.. ಹಾಗಾಯ್ತು..ನಿಮ್ಮ ಕಥೆ.. ಆದರ್ಶ.. ಗಂಡು ಹೆಣ್ಣಿನ ಸಂಬಂಧಕ್ಕೆ ಪ್ರೀತಿ ಒಂದೇ ಅರ್ಥವಲ್ಲ.. ಮಾನವೀಯ ನೆಲೆಯಲ್ಲಿ, ಸ್ನೇಹದ ನೆಲೆಯಲ್ಲಿ ಆ ಸಂಬಂಧಗಳು ಇರುತ್ತೆ... ಇಷ್ಟು ದಿನ ಸೂರ್ಯ ಕತ್ತಲಲ್ಲಿದ್ದ.. ಈಗ ಬೆಳಕಿಗೆ ಬಂದಿದ್ದಾನೆ.. ಅಷ್ಟೇ..! ಅವ್ನು ಬಯಸಿದ್ದು ಅವ್ನಿಗೆ ಸಿಕ್ಕಿದೆ.. ಅವನು ಅದರಲ್ಲೇ ತೃಪ್ತ.. ಹಾಗಾಗಿ ಅವನ ಮನಸ್ಥಿತಿಯಲ್ಲಿ ಸುಧಾರಣೆಯಾಗಿದೆ. ಅವ್ನ ತಂದೆ ತಾಯಿ ಅವನನ್ನು ಸ್ವೀಕರಿಸಿದ್ದಾರೆ ಎನ್ನುವ ದೊಡ್ಡ ಸಮಾಧಾನ ಅವ್ನಿಗೆ.. ನಿಮ್ಗೆ ರಾಮಾಯಣದಂಥ ಮಹಾಕಾವ್ಯ ಬರೆದ ವಾಲ್ಮೀಕಿ ಬಗ್ಗೆ ಗೊತ್ತ? ಆತನೂ ಮೊದಲು ಕಾಡಿನಲ್ಲಿ ಸಂಚರಿಸುವ ದಾರಿಹೋಕರನ್ನು ತಡೆದು ಸುಲಿಗೆ ಮಾಡ್ತಿದ್ದನಂತೆ.. ಬೇಡನಾಗಿದ್ದನಂತೆ.. ಕಳ್ಳತನ ಮಾಡ್ತಿದ್ದನಂತೆ.. ಹೀಗೆ ಒಮ್ಮೆ ಅವನ ದಾರಿಯಲ್ಲಿ ಸಪ್ತ ಋಷಿಗಳು ಅವನಿಗೆ ದೊರೆತರು. ಅವನಿಗೆ ಬುದ್ಧಿವಾದ ಹೇಳಿದರು. ಹೀಗೆ ಕೌನ್ಸಿಲಿಂಗ್ ದೊರೆತ ವಾಲ್ಮೀಕಿಯ ಒಳಗಣ್ಣು ತೆರೆಯಿತು. ಅವನ ಜೀವನ ಬದಲಾಯಿತು. ಮುಂದೆ ರಾಮಾಯಣದಂಥ ಮಹಾಕಾವ್ಯ ಸೃಷ್ಟಿಯಾಯಿತು. ಹೀಗೆ.. ಮುಂದೆ ಯಾರು ಹೇಗೆ ಏನಾಗ್ತಾರೆ ಅಂತ ಹೇಳಲು ಬರುವುದಿಲ್ಲ.. ಒಂದು ಪ್ರೇರಣೆ, ಒತ್ತಾಸೆ, ಇಚ್ಛಾಶಕ್ತಿ ಮುಖ್ಯವಾಗುತ್ತೆ... ಸೂರ್ಯನಲ್ಲಿ ಮೂಡಿದ್ದು ಇದೇ.'

## ಇಲ್ಲಿಯವರೆಗೆ



ಸೂರ್ಯನ ಮನ ಪರಿವರ್ತನೆಗೆ ಹೇಗಾದರೂ ಪ್ರಯತ್ನ ಮಾಡಬೇಕು ಎಂಬ ಯೋಚನೆ ಅಪೂರ್ವಳಿಗೆ. ಇದನ್ನು ಆದರ್ಶನ ಬಳಿ ಚರ್ಚಿಸಿ ಕೌನ್ಸಿಲರ್ ಹತ್ತಿರ ಕರೆದುಕೊಂಡು ಹೋಗಲು ಚಿಂತನೆ ನಡೆಸುವ ಸಲುವಾಗಿ ಅಪೂರ್ವ ಆದರ್ಶನಿಗೆ ಫೋನ್ ಮಾಡುತ್ತಾಳೆ. ಅಪೂರ್ವಳ ಫೋನ್ ಬಂದಾಗ ಖುಷಿಯಾದ ಆದರ್ಶ ತನ್ನ ಮನದ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಅಪೂರ್ವ ಸ್ನೇಹಿತರಾಗಿ ಇರೋಣ ಎನ್ನುತ್ತಾಳೆ. ಮುಂದೆ ಕೌನ್ಸಿಲರ್ ಅನ್ನು ಗೊತ್ತು ಮಾಡುತ್ತಾರೆ. ಸೂರ್ಯನ ಮನ ಒಲಿಸಿ ಅಪೂರ್ವ ಆದರ್ಶ ಸೇರಿ ಸೂರ್ಯನನ್ನು ಕೌನ್ಸಿಲರ್ ಬಳಿ ಕರೆದೊಯ್ಯುತ್ತಾರೆ.